ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **2187/2014**

ಚಾಸಾಃ 14
ಫ್ರಾಸಾಃ 14

ದಿನಾಂಕಃ **09-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ನಾಗೇಶ್ |
| ತಂದೆಯ/ಗಂಡನ ಹೆಸರು | ಅಣ್ಣಯ್ಯ |
| ವಯಸ್ಸು | 52 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಅಯ್ಯನಬಾವಿ , ತಿಪಟೂರು ತಾ. |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

**2** ಮತ್ತು **3** ನೇ ಆರೋಪಿತರು ಈ ದಿನ ಗೈರು ಹಾಜರಾಗಿದ್ದು, ಆರೋಪಿತರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ .

ಆರೋಪಿತರ ಪರಿಚಯ ನನಗೆ ಇಲ್ಲ. ಚಾಸಾ-**1** ರವರ ಪರಿಚಯ ನನಗೆ ಇದೆ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಗ್ರಾಮಾಂತರ ವೃತ್ತ ನೀರಿಕ್ಷಕರ ಕಛೇರಿಯ ಹತ್ತಿರ ಸಹಿಯನ್ನು ಮಾಡಿರುತ್ತೇನೆ.
ಸಾಕ್ಷಿಯು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ-**3** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-**3(**ಸಿ**)** ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ**27-08-2014** ರಂದು ತಿಪಟೂರು ಗ್ರಾಮಾಂತರ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಚಾಸಾ-**18** ರವರು ನನ್ನ ಹಾಗೂ ಚಾಸಾ-**1** ಮತ್ತು **13** ರವರ ಸಮಕ್ಷಮದಲ್ಲಿ ಮಧ್ಯಾಹ್ನ **12.00** ರಿಂದ **12.45** ರವರೆಗೆ ಅಮಾನತ್ತು ಪಂಚನಾಮಯನ್ನು ಜರುಗಿಸಿದ್ದರು ಮತ್ತು ಆ ಸಮಯದಲ್ಲಿ ಚಾಸಾ-**1** ರವರು ಹಾಜರಿದ್ದು, **4** ಭಾವಚಿತ್ರಗಳು ಹಾಗೂ ಒಂದು ಸಿ.ಡಿ.ಯನ್ನು ಪೋಲಿಸರು ಮುಂದಿನ ತನಿಖೆಗಾಗಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಭಾವಚಿತ್ರ ಮತ್ತು ಸಿ.ಡಿ.ಯನ್ನು ನೋಡಿ ಗುರುತಿಸಿರುವುದಿಲ್ಲ. ಆರೋಪಿರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.